**ಉಡುಪಿ ತಾಲ್ಲೂಕು ಬ್ರಹ್ಮಾವರ ವಿಧಾನಸಭಾಕ್ಷೇತ್ರದಲ್ಲಿ ಗ್ರಂಥಾಲಯ ಸೌಲಭ್ಯ**

319 - ಶ್ರೀ ವಿ. ಬಸವರಾಜ್ (ಬ್ರಹ್ಮಾವರ್): ಮಾನ್ಯ ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1993-94ನೇ ಸಾಲಿನಲ್ಲಿ ಹೊಸದಾಗಿ ಮಂಜೂರಾಗಿ ಆರಂಭಗೊಳ್ಳುವ ಗ್ರಂಥಾಲಯ ಶಾಖೆಗಳು ಎಷ್ಟು?*

ಆ) *ದಕ್ಷಿಣ ಕನ್ನಡದ ಯಾವ ಯಾವ ಸ್ಥಳಗಳಲ್ಲಿ ಹೊಸ ಗ್ರಂಥಾಲಯ ಶಾಖೆಗಳನ್ನು ತೆರೆಯಲಾಗುವುದು.*

ಇ) *ಉಡುಪಿ ತಾಲ್ಲೂಕಿನ ಕೋಟಾ, ಸಸ್ತಾನ್, ಬ್ರಹ್ಮಾವರ, ಮಂದರ್ತಿ, ಸೈಬ್ರಕಟ್ಟೆ, ಪೆರಮೂರು, ಕರ್ಕೆ, ಈ ಸ್ಥಳಗಳಲ್ಲಿ ಗ್ರಂಥಾಲಯ ಶಾಖಾ ಆರಂಭಿಸುವಲ್ಲಿ ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುವುದೇ?*

ಶ್ರೀ ಪ್ರಭಾಕರ್ ಎಸ್. ರಾಣೆ (ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು):

ಅ) 300 ಗ್ರಂಥಾಲಯಗಳು.

ಆ)

| | ತಾಲ್ಲೂಕು | | ಊರುಗಳು |
|---|---|---|---|
| 1. | ಕಾರ್ಕಳ | 1. | ಬೆಳ್ಮಣ್ಣು |
| | | 2. | ನಂದಳಿಕೆ |
| 2. | ಸೂಳ್ಯ | 1. | ಅರಂತೋಡು |
| 3. | ಬೆಳ್ತಂಗಡಿ | 2. | ನೆಲೆಯ |
| 4. | ಪುತ್ತೂರು | 1. | ನೆಲ್ಯಾಡಿ |
| | | 2. | ಕಡಬ |
| 5. | ಉಡುಪಿ | 1. | ಸಿರಿಯೂರು |
| | | 2. | ಸೈಬ್ರಕಟ್ಟೆ |
| 6. | ಮಂಗಳೂರು | 1. | ಕಂದಾವರ |
| | | 2. | ಎಕ್ಕಾರು |
| | | 3. | ಕಟೀಲು |
| 7. | ಕುಂದಾಪುರ | 1. | ನಾವುಂದು |
| | | 2. | ಹೆಮ್ಮಾಡಿ |
| | | 3. | ಶಿರೂರು |

ಇ) 1993-94ನೇ ಸಾಲಿನಲ್ಲಿ ಸೈಬ್ರಕಟ್ಟೆಯಲ್ಲಿ ಗ್ರಂಥಾಲಯವನ್ನು ಪ್ರಾರಂಭಿಸಲಾಗುವುದು ಹಾಗೂ ಉಳಿದ ಸ್ಥಳಗಳಲ್ಲಿ ಹಂತ ಹಂತವಾಗಿ ಗ್ರಂಥಾಲಯಗಳನ್ನು ಪ್ರಾರಂಭಿಸಲಾಗುವುದು.

**ಚನ್ನಪಟ್ಟಣದಲ್ಲಿ ಪೃಕ್ಷ ಸಂರಕ್ಷಣಾ ಕಾಯ್ದೆ**

254 - ಶ್ರೀ ಸಾದತ್ ಆಲಿ ಖಾನ್ (ಚನ್ನಪಟ್ಟಣ); ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕ ವೃಕ್ಷಾ ಸಂರಕ್ಷಣಾ ಕಾಯ್ದೆ 1976ರ ಕಾಯ್ದೆ 3ರಂತೆ ಪ್ರತಿಯೊಂದು ನಗರ ಮತ್ತು ಗ್ರಾಮೀಣ ಪ್ರದೇಶಗಳಿಗೆ ವೃಕ್ಷ ಪ್ರಾಧಿಕಾರವನ್ನು ರಚಿಸಲಾಗಿದೆಯೇ*

ಆ) *ಅಂತಹ ಪ್ರಾಧಿಕಾರವನ್ನು ಚನ್ನಪಟ್ಟಣ ತಾಲ್ಲೂಕಿನಲ್ಲಿ ರಚಿಸಲಾಗಿದೆಯೇ? ಹಾಗಿದ್ದಲ್ಲಿ ಯಾವಾಗ ರಚಿಸಲಾಗಿದೆ. (ಸದಸ್ಯರ ಹೆಸರನ್ನು ತಿಳಿಸುವುದು)*